## ಹಾgay ಸುಮ್ಮನೇ...

"ಛೀ ಛೀ ಜಗತ್ತು ಹಾಳಾಗ್ತಾ ಇದೆ, ಎನ್ ಕಥೆ ಇದು ಕಲಿಯುಗ ಕಾಳ ರೂಪ ದರ್ಶನ, ಕೃಷ್ಣ ಕಲ್ಕಿಯಾಗಿ ಯಾವಗ ಬರ್ತೀಯೊ" ಅಂತೇನೊ ಬಡಬಡಿಸುತ್ತ ಪೇಪರು ಆಕಡೆ ಬೀಸಾಕಿ ಪಾಕಶಾಲೆಗೆ ನಡೆದಳು, ಅಲ್ಲಪ್ಪ ಜಗತ್ತಿನ ಯೋಚನೆ ಇವಳಿಗ್ಯಾಕೆ ಬಂತು ಅಂತೀನಿ, ಅದರಲ್ಲೂ ರಾಮ ಕೃಷ್ಣ ಅಂತಾ ಬೇರೆ ಎಲ್ಲ ಹಳೆ ಕಾಲದ ಮನೆ ಮೂಲೆ ಹಿಡಿದು ಕೂತಿರುವ ಮುದುಕಿಯಂತೆ ಇವಳ್ಯಾಕೆ ಮಾತಾಡ್ತಾ ಇದಾಳೆ, ನನ್ನ ಚಿರಯೌವನ ಚೆಲುವೆಗೇನಾದ್ರೂ ವಯಸ್ಸಾಯ್ತಾ, ಅಂತ ಸಂಶಯವಾಯ್ತು. "ಏನೇ ಇದೆ ಪೇಪರಿನಲ್ಲಿ" ಅಂತನ್ನುತ್ತ ಕೆಳಗೆ ಬಿದ್ದಿದ್ದ ಪೇಪರು ಎತ್ತಿ ನೋಡಿದೆ, ನನಗೇನೂ ಅದರಲ್ಲಿ ಅಂಥದ್ದು ವಿಶೇಷವೇನೂ ಕಾಣಲಿಲ್ಲ.

ಪಾಕಶಾಲೆಯತ್ತ ಹೆಜ್ಜೆ ಹಾಕುತ್ತಾ, "ಏನು ಕಲಿಯುಗ, ಕಲ್ಕಿ ಅಂತೆಲ್ಲ ಅಂತಿದ್ದೆ ಏನಾಯ್ತು, ಪೇಪರಿನಲ್ಲೇನಿದೆ ಅಂಥದ್ದು" ಅಂದೆ, "ಯಾಕೆ ಕಾಣಿಸಲಿಲ್ವಾ, ಅದೇನೊ ಗೇ ರೈಟ್ಸ ಅಂತೆ, 377 ಕಲಂ ತೆಗೆದು ಹಾಕಿ ಕಾನೂನು ಸಮ್ಮತ ಮಾಡ್ತಾರಂತೆ... ಕೃಷ್ಣ, ಕಲಿಯುಗ ಅಧಪತನಕ್ಕಿಳಿದಾಗ ಕಲ್ಕಿಯಾಗಿ ಬಂದು ವಿಶ್ವವನ್ನು ಪುನ: ರಚಿಸುತ್ತೇನೆ ಅಂತ ಹೇಳಿದ್ದನಂತೆ, ಇನ್ನೂ ಯಾಕೆ ಕಾಯ್ತಿದಾನೆ ಅಂತ" ಕೈಲಿದ್ದ ಪಾತ್ರೆಯನ್ನು ಒಲೆ ಮೇಲೆ ಕುಕ್ಕಿದಳು, ನಾನೊಂದು ಚಿಕ್ಕ ಮುಗುಳ್ನಗು ಕೊಟ್ಟು ಹೊರಗೆ ಬಂದೆ, "ಅಲ್ರೀ ಈ ಜನರಿಗೆ ಬೇರೆ ಕೆಲಸಾನೆ ಇಲ್ವಾ" ಅಂತನ್ನುತ್ತಾ ಮತ್ತೆ ಹೊರಗೆ ಬಂದಳು, "ಕೆಲವರಿಗೆ ಅದೇ ಕೆಲಸ" ಅಂದೆ. ಅದೇನು ಹಾಗಂದ್ರೆ ಅನ್ನೊವಂತೆ ನೋಡಿದ್ಲು, "ಹೀಗೇ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಅಂತ ಹೇಳಿಕೊಂಡು ಯಾವುದಾದರೂ ಕೆಲಸಕ್ಕೆ ಬಾರದ ವಿಷಯ ಎತ್ತಿ, ಸಮಾಜ ಸೇವೆ ಅಂತ ಸಮಾಜ ಹಾಳು ಮಾಡೊ ಕೆಲಸ ಮಾಡೋದು" ಅಂದೆ. "ಆದರೂ ಕೆಲವು ಒಳ್ಳೆ ಕೆಲ್ಸಾನೂ ಮಾಡ್ತಿವೆ ಅಲ್ರೀ" ಅಂದ್ಲು, "ನಾನೆಲ್ಲಿ ಇಲ್ಲ ಅಂದೆ, ಅದಕ್ಕೆ "ಕೆಲ" ಅಂತ ಹೇಳಿದ್ದು, ಆದರೆ ಒಳ್ಳೇದಕ್ಕಿಂತ ಇಂಥದ್ದೇ ಜಾಸ್ತಿ ಪ್ರಚಾರ ಆಗಿಬಿಡ್ತದೇ ಏನು ಮಾಡೊದು" ಅಂದೆ. "ಈ ಆಧುನಿಕತೆ ಅಂತ ಎಲ್ಲೊ ಹೋಗ್ತಾ ಇದೀವಿ ಏನೊ" ಅಂದ್ಲು, "ಹಾಗೆ ನೋಡಿದ್ರೆ ಇದೇನು ಆಧುನಿಕ ಜಗತ್ತಿನಲ್ಲೇ ಬಂದದ್ದೇನಲ್ಲ, ಪುರಾತನ ಕಾಲದಲ್ಲೂ  ಇತ್ತು ಆದರೆ ಪಾಪ ಪ್ರಜ್ಞೆಯಿಂದ ಬಹಳ ಬೆಳಕಿಗೆ ಬಂದಿರಲಿಲ್ಲ ಅಷ್ಟೇ" ಅಂದೆ. "ಮತ್ತೆ ಮುಂದೇನು" ಅಂದಳು, "ಮುಂದೇನು ಅಂದ್ರೆ, ನಿನಗೆ **ಮಗ ಹುಟ್ಟಿ ಮದುವೆ ವಯಸ್ಸಿಗೆ ಬಂದಾಗ ಅಮ್ಮ ನಾನೊಂದು ಹುಡುಗನ್ನ ಇಷ್ಟಪಡ್ತಿದೀನಿ ಅಂತ ಹೇಳದಿರಲಿ** ಅಂತ ಬೇಡಿಕೊ ಅಷ್ಟೇ" ಅಂದೆ. "ಇನ್ನೇನು ಯಾವುದೋ ಹುಡುಗಿ ಇಷ್ಟ ಪಡ್ತಿದೀನಿ ಅಂದ್ರೆ ಏನು ಕುಲ ಗೊತ್ರಾ ಏನೂ ನೋಡದೆ ಮದುವೆ ಮಾಡಿಬಿಡೊದಾ?" ಅಂದ್ಲು "ಮತ್ತಿನ್ನೇನು ಹುಡುಗನ್ನ ಮದುವೆ ಆಗ್ತೀನಿ ಅನಲಿಲ್ಲ ಅಂತ ಖುಷಿ ಪಡಬೇಕು ಕಣೇ" ಅಂದೆ. "ಹಾಗೆಲ್ಲ ಆದ್ರೆ ಸಮಾಜ ಏನನ್ನುತ್ತೇರೀ" ಅಂದ್ಲು "ಸಮಾಜ ಏನನ್ನುತ್ತೇ, ಸಮಾಜ ಅನ್ನೊದು ಏನು ಹೇಳು ನಾವೇ ನಮ್ಮ ಸುತ್ತ ಹಾಕಿಕೊಂಡ ಪರಿಧಿ, ಬೇಲಿ ಹಾಗೆ... ಇದೇ ಹದ್ದು ಇದನ್ನು ಮೀರಬಾರದು ಅಂತ ನಮ್ಮವೇ ಕಟ್ಟುಪಾಡುಗಳು, ನಾವೇ ಬದಲಾಗುತ್ತ ನಡೆದರೆ ಆ ಪರಿಧಿಯನ್ನ ದೂರ ಸರಿಸುತ್ತಾ ಹೋಗುತ್ತೇವೆ." ಅಂದೆ.

"ಅರ್ಥ ಆಗ್ಲಿಲ್ಲ" ಅಂದ್ಲು. "ಮೊದಲು ಮದುವೆ ಅಂದ್ರೇನು?" ಅಂದೆ. "ಈ ಡೌಟ್ ಯಾಕೆ ಬಂತೀಗ, ಅದೂ ಮದುವೆ ಆಗಿ ವರ್ಷಗಳೇ ಆದಮೇಲೆ" ಅಂದ್ಲು "ವರ್ಷ ಆಯ್ತಲ್ಲ ಮರೆತು ಹೋಗಿದೆ" ಅಂದೆ "ಸಪ್ತ ಪದಿ ತುಳಿದು, ಏಳೇಳು ಜನ್ಮಕ್ಕೆ ನೀನೇ ನನ್ನ ಸಂಗಾತಿ ಅಂತ ಪ್ರಮಾಣ ಮಾಡಿದ್ದು ಮರೆತು ಹೋಯ್ತಾ?" ಅಂತ ಕಿವಿ ತಿರುವಿದಳು, "ಇನ್ನೂ ತಿರುವಿ ಬಿಡ್ಲಾ ಇಲ್ಲಾ ನೆನಪಿಗೆ ಬಂತಾ" ಅಂದ್ಲು "ಹಾಂ... ನೆನಪಿಗೆ ಬಂತು" ಅಂದೆ, ಕೆಂಪಗಾದ ಕಿವಿ ಸವರಿಕೊಳ್ಳುತ್ತ, "ಈ ಜನ್ಮ ಒಂದೇ ಅಲ್ದೇ ಏಳೇಳು ಜನ್ಮ ಬೇರೆ ಅಂತೆ, ಈಗಲೇ ಸಾಕಾಗಿದೆ" ಅಂತೇನೊ ಗೊಣಗಿದೆ. "ಏನದು ಏನೋ ಗುಸುಗುಸು ಅಂತೀದೀರಾ" ಅಂದ್ಲು "ಹೇ ಏನಿಲ್ಲ ಬರೀ ಏಳೇ ಜನ್ಮಾನಾ, ಇನ್ನೊಂದು ನಾಲ್ಕೈದು ಸೇರಿಸಿ ಒಂದು ಡಜನ್ನು ಮಾಡಿಬಿಡಬಹುದಿತ್ತಲ್ಲ ಅಂತಾ ಇದ್ದೆ.. ಹೀ ಹೀ ಹೀ" ಹಲ್ಲು ಕಿರಿದೆ. "ಏಳೇಳು ಜನ್ಮಾ ಏನೂ ಬೇಡ ಈ ಜನ್ಮದಲ್ಲಾದರೂ ನನ್ನ ಜತೇನೆ ಇದ್ರೆ ಸಾಕಪ್ಪ" ಅಂದ್ಲು. ಅಬ್ಬಾ ದೀಪಾವಳಿ ಬಟ್ಟೆ ಸೇಲಿನಲ್ಲಿ ಒಂದು ತೆಗೆದುಕೊಂಡ್ರೆ ಆರು ಫ್ರೀ ಅಂತ ಡಿಸ್ಕೌಂಟ ಸಿಕ್ಕಷ್ಟು ಖುಷಿಯಾಯ್ತು. "ಹಾಗಾದ್ರೆ ಮದುವೆಯಂದ್ರೆ ನೀನು ನಾನು ಜತೆಯಾಗಿ ಸಂಗಾತಿಗಳಾಗಿ ಜೀವನ ಮಾಡ್ತೀವಿ ಅಂತ ಜೊತೆಯಾಗೋದು ಅಂದ ಹಾಗಾಯ್ತು" ಅಂದೆ, "ಬರೀ ಅಷ್ಟೇ ಏನಲ್ಲ, ಆದರೂ ಚಿಕ್ಕಾದಾಗಿ ಹೇಳಬೇಕೆಂದ್ರೆ ಅದು ನಿಜ" ಅಂದ್ಲು. "ಹಾಗಾದ್ರೆ ಅದನ್ನೇ ಹುಡುಗ ಹುಡುಗಾನೇ, ರಾಮ್ ವೆಡ್ಸ ಶಾಮ್ ಅಂತ, ಇಲ್ಲ ಹುಡುಗಿ ಹುಡುಗಿಯೇ ರಿಂಕಿ ವೆಡ್ಸ ಪಿಂಕಿ ಅಂತಾನೊ ಯಾಕೆ ಮಾಡಬಾರದು, ಅವರೇ ಜತೆ ಜತೆಯಾಗಿ ಯಾಕೆ ಇರಬಾರದು ಅಂತಾನೇ ಅವರು ಕೇಳ್ತಿರೋದು" ಅಂದೆ, "ಅಲ್ಲ ಹುಡುಗೀರು ಹಾಗೇ ಕೇಳ್ತಿದಾರ?" ಅಂದ್ಲು "ಹೂಂ ಮತ್ತೆ , ಅವರಿಗೆ ಲೆಸ್ಬಿಯನ ಅಂತಾರೆ" ಅಂದೆ. "ಅಬ್ಬಾ, ಹುಡುಗೀರು ಇಷ್ಟು ಮುಂದುವರೆದೀದೀರಾ?" ಅಂದ್ಲು "ನೀನೆ ಹಿಂದೆ ಹೀಗೆ ಮನೇಲಿ ಕೂತಿರೋದು, ಲೀಡ ಏನಾದ್ರೂ ತೆಗೆದುಕೊಳ್ತೀಯಾ ಅವರ ಹೋರಾಟದಲ್ಲಿ" ಅಂದೆ, ಕೈಗೆ ಸಿಕ್ಕ ಸೊಫಾ ಮೇಲಿನ ಎಲ್ಲ ದಿಂಬುಗಳ ಪ್ರಹಾರ ನನ್ನ ಮೇಲಾಯ್ತು.

ಎಲ್ಲ ದಿಂಬುಗಳ ಅತ್ತ ಕಡೆ ಸರಿಯಾಗಿ ಪೇರಿಸಿಟ್ಟು, ಅವಳನ್ನೇ ದಿಂಬು ಮಾಡಿಕೊಂಡು ಒರಗಿದೆ, ಇನ್ನೂ ಕೆಂಪಾಗಿದ್ದ ಕಿವಿ ಸವರುತ್ತ, ಏನೋ ಮಹಾನ ಸಂಶೋಧನೆ ಮಾಡಿ ಕಂಡು ಹಿಡಿದ ಹಾಗೆ "ಸಂತತಿ ಹೇಗೆ ಬೆಳೆಯೋದು, ಅದಕ್ಕಾದರೂ ಹುಡುಗ ಹುಡುಗಿ ಮದುವೆಗೆ ಅರ್ಥ ಇದೆಯಲ್ಲ" ಅಂದ್ಲು. "ಮೊದಲೇ ಜನಸಂಖ್ಯೆ ಬೆಳೀತಿದೆ, ಯಾರಿಗೆ ಮಕ್ಕಳಾಗಿ ಏನಾಗಬೇಕಿದೆ, ಅನಾಥ ಮಕ್ಕಳು ದತ್ತು ತೆಗೆದುಕೊಳ್ತಾರೆ" ಅಂದೆ. "ಶಾಲೆಗೆ ಎಲ್ಲಾ ಸೇರಿಸಬೇಕಾದ್ರೆ ಫಾರ್ಮನಲ್ಲಿ ಅಪ್ಪ ಅಮ್ಮಾ ಅಂತ ಯಾರ ಹೆಸ್ರು ತುಂಬೋದು, ಹೇಳಿಬಿಟ್ರೆ ಸುಮ್ನೇನಾ" ಅಂತ ವಾದ ಮಂಡಿಸಿದಳು. "ಇಷ್ಟಕ್ಕೂ ಈಗ ಸದ್ಯ ಮದುವೆ ಆಗಬಹುದು ಅಂತ ಏನೂ ಸಮ್ಮತಿ ಕೊಟ್ಟಿಲ್ಲ(ವಿದೇಶದಲ್ಲಿ ಅದೂ ಆಗಿದೆ), ಅದು ಕಾನೂನುಬಾಹಿರವಲ್ಲ ಅಂತ ಮಾತ್ರ, ಅದರ ಮೇಲಿದ್ದ ಕಾನೂನನ್ನು ಕಿತ್ತು ಹಾಕೀದಾರೆ ಅಷ್ಟೇ, ಹಾಗೇನಾದ್ರೂ ನಾಳೆ ಮದುವೆಗೂ ಸಮ್ಮತಿ ಕೊಟ್ರೆ ಅದಕ್ಕೂ ಏನೊ ಒಂದು ಉಪಾಯ ಮಾಡ್ತಾರೆ ಬಿಡು" ಅಂದೆ. "ಕಾನೂನು ಅಂತ ಇತ್ತಲ್ಲ ಈಗ ಅದೂ ಇಲ್ಲ" ಅಂದ್ಲು. "ಅಲ್ಲ ಯಾವ ಕಾನೂನು ಇದ್ದು ಏನು ಆಗಿದೆ ಹೇಳು, ಕಾನೂನುಗಳು ಮಾಡಿದ್ದೇ ಅವುಗಳನ್ನು ಮುರಿಯೋಕೆ, ಮೀರಿ ಹೋಗೋಕೆ ಅನ್ನೊ ಹಾಗಿದೆ ಈಗಿನ ಪರಿಸ್ಥಿತಿ, ಹಾಗಿರುವಾಗ ಆ ಕಾನೂನು ಎಷ್ಟರ ಮಟ್ಟಿಗೆ ಉಪಯೋಗ ಆಗಿತ್ತು? ಆದರೆ ಈ ಕಾನೂನು ತೆಗೆದು ಹಾಕಿದ್ದು ಅವರಿಗೊಂದು ನೈತಿಕ ಜಯ ಸಿಕ್ಕ ಹಾಗೆ ಆಗಿದೆ ಅಷ್ಟೇ" ಅಂದೆ. "ಅಲ್ಲಾ ಆಗಲಿಂದ ನೋಡ್ತಾ ಇದೀನಿ, ಏನು ಬರೀ ಅವರ ಪರವಾಗೇ ವಕಾಲತ್ತು ನಡಿಸೀದೀರಾ ಏನ್ ಕಥೆ ನಿಮ್ದು" ಅಂತ ಹುಬ್ಬು ಹಾರಿಸಿದಳು. "ಲೇ ನನ್ನ ಮೇಲೆ ಯಾಕೆ ನಿನಗೇ ಡೌಟು?" ಅಂತ ಅವಳ ಕೈಗಳೆರಡನ್ನೂ ನನ್ನ ಕೈಯಲ್ಲಿ ಬಂಧಿಯಾಗಿಸಿದೆ, ಎಲ್ಲಿ ನನ್ನ ಬಿಟ್ಟು ಹೋದಾಳು ಅಂತ ಏನೋ. ಮುಗುಳ್ನಗುತ್ತಾ "ಯಾರು ಹೇಗೆ ಅಂತ ಏನು ಹೇಳೋದಪ್ಪ" ಅಂದ್ಲು. ಕೈಗಳನ್ನು ಇನ್ನಷ್ಟು ಬಿಗಿಯಾಗಿಸಿದೆ. "ಅವರದ್ದೆ ಆದ ಕೆಲವು ಗುರುತುಗಳಿವೆ, ಅದು ದೇಶದಿಂದ ದೇಶಕ್ಕೆ ಬೇರೆ ಬೇರೆ, ಕೆಲವು ಕಡೆ ಪಿಂಕ ಶರ್ಟು ಹಾಕಿದ್ರೆ" ಅಂತಿದ್ದಂಗೆ "ಅಯ್ಯೊ ಅಲ್ಲೂ ಪಿಂಕಾ, ವ್ಯಾಲೆಂಟೈನ ಡೇಗೆ ಪಿಂಕ ಚಡ್ಡಿ ಅಭಿಯಾನ, ನಿಮ್ಮ ಸಾಫ್ಟವೇರ ಕಂಪನೀಲಿ ಕೆಲಸದಿಂದ ತೆಗೆಯೋಕೆ ಪಿಂಕ ಸ್ಲಿಪ್ಪು, ಇನ್ನೂ ಇಲ್ಲಿ ಇದು ಬೇರೇನಾ, ಅಲ್ಲ ಪಾಪ ಆ ಪಿಂಕ ಕಲರು ಎನ್ ಪಾಪಾ ಮಾಡಿದೆ ಅಂತೀನಿ" ಅಂದವಳು "ಸ್ವಲ್ಪ ಏಳ್ರೀ ಮೇಲೆ **ಬೀರುನಲ್ಲಿ ನಿಮ್ದು ಯಾವದಾದ್ರೂ ಪಿಂಕ ಶರ್ಟ ಇದೇನ ನೋಡಿ ಬರ್ತೀನಿ**" ಅಂದ್ಲು, ಅಲ್ಲೇ ನನ್ನ ಕೈಯಲ್ಲಿದ್ದ ಅವಳ ಕೈ ಕಚ್ಚಿದೆ, "ಇಲ್ಲ... ಇಲ್ಲ... ಯಾವದೂ ಇಲ್ಲ ನಂಗೊತ್ತು ಬಿಡಿ ರೀ... ರೀ..." ಅಂತ ಚೀರಿದಳು. "ನೋಡು ನಿನ್ನ ಕೈ ಕೂಡ ಪಿಂಕ ಆಯ್ತು ಕಚ್ಚಿದಲ್ಲಿ" ಅಂದೆ ನಾಚಿದಳು ಗಲ್ಲ ಕೂಡ ಪಿಂಕ ಆಯ್ತು.

"ಇಷ್ಟೇನಾ ಇನ್ನೂ ಏನಾದ್ರೂ ಪಿಂಕ್ ಇದೇನಾ" ಅಂದವಳಿಗೆ "ಪಿಂಕಿ ರಿಂಗ ಅಂತಿದೆ, ಪಿಂಕಿ ಫಿಂಗರ್ ಅಂದ್ರೆ ಕಿರುಬೆರಳಿಗೆ ಸ್ಟೀಲ್ ರಿಂಗ್ ಹಾಕೋತಾರೆ" ಅಂದೆ. "ರಿಂಗ ಬೇರೆನಾ" ಅಂತ ಉದ್ಗಾರ ತೆಗೆದ್ಲು "ಬಲಕಿವೀಲಿ ಕಿವಿಯ ರಿಂಗ, ಕಿಲಿಯೋಲೆ ಹಾಕಿದ್ರೂ ಕೂಡ ಅದೇ ಸಂಕೇತ ಕೆಲವು ಕಡೆ" ಅಂತಂದೆ. ನನ್ನ ಕಿರುಬೆರಳು ಪರೀಕ್ಷೆಯಾಗುತ್ತಿತ್ತು ಆ ಕ್ಷಣದಲ್ಲಿ, "ಲೇ ನನ್ನ ಮೇಲೆ ಯಾಕೇ ನಿನಗೆ ಸಂಶಯ, ಆಗಲಿಂದ ನನ್ನೇ ಚೆಕ್ ಮಾಡ್ತಿದೀಯಾ" ಅಂದರೆ "ಅಲ್ಲ ಇಷ್ಟೆಲ್ಲ ಮಾಹಿತಿ ಎಲ್ಲಿಂದ ಬಂತು ಅಂತ" ಪ್ರಶ್ನಿಸಿದಳು, "ಭಾರತದಲ್ಲಿ ಇದಿನ್ನೂ ಆ ಮಟ್ಟಿಗೆ ಚಾಲ್ತಿಯಲ್ಲಿ ಇಲ್ಲ ಆದರೆ ವಿದೇಶದಲ್ಲಿ ಸ್ವಲ್ಪ ಹುಷಾರಾಗೇ ಇರಬೇಕು. ವಿದೇಶಕ್ಕೆ ಹೊರಟಿದ್ದ ಗೆಳೆಯನಿಗೆ ಕೊಲೀಗ(ಸಹುದ್ಯೋಗಿ) ಕೊಟ್ಟ ಮಾಹಿತಿ, ನನಗೂ ಆಗಲೇ ಇದೆಲ್ಲ ತಿಳಿದದ್ದು... ಇಲ್ಲೇನು ಬಿಡು ಗೆಳೆಯರಿಬ್ರು ಹೆಗಲ ಮೇಲೆ ಕೈ ಹಾಕಿಕೊಂಡು ಹೋದ್ರೂ ಯಾರೂ ಏನೂ ಅನ್ಕೊಳ್ಳಲ್ಲ ಆದರೆ ಕೆಲವು ವಿದೇಶಗಳಲ್ಲಿ ಒಬ್ಬರನ್ನೊಬ್ಬರು ಮುಟ್ಟೋ ಹಾಗೆ ಕೂಡ ಇಲ್ಲ" ಅಂದೆ "ಹೌದಾ!" ಅಂತ ಅಶ್ಚರ್ಯಪಟ್ಟಳು, "ಅಷ್ಟೇ ಏನೂ ಹಾಕೊ ಒಂದು ಸಾಕ್ಸು ಬದಲಾದ್ರೂ ಏನೇನೋ ಅರ್ಥ ಬಂದು ಬಿಡತ್ತೆ" ಅಂದೆ. "ಸಾಕ್ಸಾ?!" ಅಂತ ಹೌಹಾರಿದಳು "ಹೂಂ ರೈನಬೊ, ಅದೇ ಕಾಮನಬಿಲ್ಲಿನ ಕಲರು ಸಾಕ್ಸ ಅವರೇ ಹಾಕೋಳ್ಳೋದು, ಅದನ್ನ ಬಿಡು ಕೆಲವು ಕಡೆ ಬಿಳಿ ಸಾಕ್ಸ ಕೂಡ ಅದರ ಗುರುತು" ಅಂದೆ. ಅದನ್ನೆಲ್ಲ ಕೇಳಿ ಅವಳಿಗೆ ಅರಗಿಸಿಕೊಳ್ಳಲು ಸ್ವಲ್ಪ ಸಮಯವೇ ಬೇಕಾಯ್ತು.

"ಹೀಗಾದ್ರೆ ಹೇಗೆ, ಏನು ಜನ ಹೀಗ್ಯಾಕೆ ಮಾಡ್ತಾರೆ" ಅಂದ್ಲು, "ಸ್ವಲ್ಪ ಈ ಪ್ಯಾಶನ್ನು ಇಂಡಸ್ಟ್ರಿನಲ್ಲಿ ಇದು ಇದೆ, ಎಲ್ರೂ ಅಲ್ಲ ಆದರೂ ಈ ದಿನಾಲು ಹುಡುಗಿಯರ ಗುಂಪಿನಿಂದಲೇ ಸುತ್ತುವರೆದಿರುವ ಅಲ್ಲಿನ ಕೆಲವರಿಗೆ ಇಂಥ ಯೋಚನೆಗಳು ಬಂದರೆ ಅಚ್ಚರಿಯಿಲ್ಲ ಒಂಥರಾ ಅಡುಗೆ ಭಟ್ಟರಿಗೆ ದಿನಾಲೂ ಅದೇ ಸ್ವೀಟು ಮಾಡಿ ಅದರ ಘಾಟು ಬಡಿದು ಬಡಿದು ಅವರೇ ಮಾಡಿದ ಸ್ವೀಟ ಅವರೇ ತಿನ್ನೊಕಾಗದಿರೋ ಹಾಗೆ ಬರುವ ವಾಕರಿಕೆ ನೀರಸತನ ಒಂದು ಕಾರಣವಾಗಿರಬಹುದು" "ಹೌದ್ರೀ, ಈ ಹೂರಣದ ಹೋಳಿಗೆ ಮಾಡಿದಾಗಲೆಲ್ಲ ನನಗೂ ಅದನ್ನ ತಿನ್ನೋಕೆ ಮನಸೇ ಆಗಲ್ಲ" ಅಂದ್ಲು ಹೂರಣದ ಹೋಳಿಗೆ ಹೆಸರು ಕೇಳಿ ಬಾಯಿ ನೀರೂರಿತು, "ಸ್ವಲ್ಪ ತಾಳು ಹಾಗಿದ್ರೆ, ನೀರು ಕುಡಿದು ಬರ್ತೀನಿ ಇನ್ನೊಂದು ಕಾರಣ ಬಂದು ಹೇಳ್ತೀನಿ, ಅಲ್ಲೀವರೆಗೆ ಆ ಪೇಪರು ಮೂರನೇ ಪೇಜು ಮಾತ್ರ ನೋಡಬೇಡ" ಅಂತ ಒಳಗೆ ಅಡುಗೆಮನೆಗೆ ಹೋದೆ.

ಬರುವಷ್ಟರಲ್ಲಿ ಮೂರನೇ ಪೇಜು ತೆಗೆದುಕೊಂಡು ಕೂತಿದ್ದಳು "ಏನಿದೆ ಮೂರನೇ ಪೇಜಿನಲ್ಲಿ ಅಂಥದ್ದು?" ಅಂದ್ಲು "ನನಗೇನು ಗೊತ್ತು, ನಿನಗೆ ನೋಡಬೇಡ ಅಂತ ಅಲ್ವಾ ಹೇಳಿದ್ದು, ಯಾಕೇ ನೋಡಿದೆ?" ಅಂದೆ ತಣ್ಣಗೆ ಮೂವತ್ತೆರಡು ಹಲ್ಲು ಕಾಣಿಸಿದಳು "ಸುಮ್ನೆ ಕುತೂಹಲ, ಈಗ ಏನಿದೆ ಅಂತ ಹೇಳ್ತೀರೊ ಇಲ್ವೊ" ಅಂದ್ಲು. "ಹೇಳೊದೇನು, ಅಲ್ಲೇನೂ ಇಲ್ಲ, ಬೇಡ ಅಂತ ಹೇಳಿ ಯಾವಾಗ ಮುಚ್ಚಿಡಲು ಶುರು ಮಾಡುತ್ತೇವೊ ಆಗ ಅಲ್ಲಿ ಕುತೂಹಲ ಜಾಸ್ತಿಯಾಗತ್ತೆ, ಅದೇ ಇಂಥ ವಿಷಯಗಳಲ್ಲಿ ಆಗೋದು" ಅಂದ್ರೇನು "ಶಾಲೇಗೊ ಹೋಗೊ ಮಗುಗೆ ಇದನ್ನೆಲ್ಲ ಹೇಳೊಕೆ ಆಗತ್ತ? ನಿಮ್ಮಂಗೆ ಪೋಲಿ ಆಗಿ ಹೋಗ್ತಾರೆ ಅಷ್ಟೇ" ಅಂದ್ಲು, "ಶಾಲೆಗೆ ಹೋಗೊ ಮಗೂಗೇ ಹೇಳು ಅಂದ್ನಾ" ಅಂತ ನಾ ಸಿಟ್ಟಿನಿಂದ ನೋಡಿದೆ, "ಪೋಲಿ ಅಂದದ್ದಕ್ಕೆ ಸಿಟ್ಟಾಗಬೇಡ ಪುಟ್ಟಾ"

ಅಂದ್ಲು. ನಗು ಬಂತು ತಡೆದುಕೊಂಡು "ಸರಿಯಾದ ವಯಸ್ಸಿನಲ್ಲಿ ಸ್ವಲ್ಪ ಸ್ವಲ್ಪ ಸರಿಯಾದ ತಿಳುವಳಿಕೆ ಕೊಡ್ತಾ ಬರೋದು ಪೋಷಕರ ಕರ್ತವ್ಯ, ಹುಟ್ಟಿಸಿ ಬಿಟ್ರೆ ಆಯ್ತಾ, ನನ್ನೂ ಎಲ್ಲೊ ಬೊಂಬೆ ತರೊ ಅಂಗಡೀಲಿ ಕೊಂಡು ತಂದೀದಾರೆ ಅಂತ ಮಕ್ಕಳು ಅಂದುಕೋತಾರೆ ಅಷ್ಟೆ, ಇತಿಮಿತಿಯಲ್ಲಿ ತಕ್ಕಮಟ್ಟಿನ ಜ್ಞಾನ, ಸಮಾಜ, ಕುಟುಂಬ ಇದರ ಬಗ್ಗೆ ಸ್ವಲ್ಪ ಸರಿಯಾದ ತಿಳುವಳಿಕೆ ಕೊಡ್ತಾ ಬರಬೇಕು, ಮಡಿವಂತಿಕೆ ಅಂತ ಕೂತರೆ ಕುತೂಹಲಿಗಳು ಏನೇನೊ ಕಂಡುಕೊಂಡು ಬಿಡ್ತಾರೆ.", "ರೀ ನಮ್ಮನೆಗೆ ಬೊಂಬೆ ಯಾವಾಗ ಬರೋದು" ಅಂತ ನಾಚಿದಳು "ಆರ್ಡರ ಕೊಡೋಣ್ವಾ!" ಅಂತ ಹತ್ತಿರ ಹೋದೆ, "ಆಸೇ ನೋಡು" ಅಂತ ದೂರ ತಳ್ಳಿದಳು.

ಸಮಾಜ ನಾವೇ ಕಟ್ಟಿಕೊಂಡ ಒಂದು ವ್ಯವಸ್ಥೆಯಾಗಿರುವಾಗ ಇಂದು  ನಾಲ್ಕು ಜನ ಬೇಕೆಂದರು ಅಂತ ಕಟ್ಟುಗಳನ್ನು ಸಡಿಲ ಮಾಡಿದರೆ ಸಮಾಜ ಅನ್ನೋದು ಮುರಿದು ಬೀಳಲ್ಲವೇ, ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳನ್ನೇ ಗಮನಿಸಿ, ಈಗಾಗಲೇ ಆಗಿರುವ ಎಷ್ಟೊ ಮಾರ್ಪಾಡುಗಳು, ಲಿವಿಂಗ ಟುಗೆದರ(ಜೊತೆಯಾಗಿ ಮದುವೆಯಾಗದೇ ಇರೋದು), ವೈಫ್ ಸ್ವಾಪಿಂಗ (ಹೆಂಡಂದಿರನ್ನು ಅದಲು ಬದಲಾಯಿಸಿಕೊಳ್ಳುವ) ಇಲ್ಲ ಡಿವೊರ್ಸ ಆಗಿರಬಹುದು, ಅನೈತಿಕ ಸಂಬಂಧಗಳೇ ಆಗಿರಬಹುದು ಇವೆಲ್ಲ ಒಂದಿಲ್ಲ ಒಂದು ರೀತಿ ಕುಟುಂಬ ಅನ್ನೋ ಪರಿಕಲ್ಪನೆಗೆ ಹೊಡೆತ ಕೊಡುತ್ತ ಬಂದಿವೆ, ಈವತ್ತು ಇದನ್ನು ಮಾನ್ಯ ಮಾಡಿದವರು, ನಾಳೆ ಇನ್ನೊಂದಕ್ಕೆ ಅನುಮತಿಯ ಮುದ್ರೆ ಒತ್ತುತ್ತ ಹೋಗಿ, ಹೀಗೆ ಕಟ್ಟುಪಾಡುಗಳೆಲ್ಲ ಕಳೆದುಹೋದರೆ ನಮಗೂ ನಾಯಿ ನರಿಗಳಂತ ಪ್ರಾಣಿಗಳಿಗೂ ಏನು ವ್ಯತ್ಯಾಸವಿರಲಿಕ್ಕಿಲ್ಲ, ಅಂಥ ಕಾಲ ಒಂದು ದಿನ ಬರಬಹುದು, ಯಾಕೆಂದರೆ **ಕಾಲ ಬದಲಾಗುತ್ತಿದೆ ನಾವೂ ಬದಲಾಗಬೇಕು ಅಂತ ಹೇಳುತ್ತ ನಾವೇ ಬದಲಾಗಿ ಕಾಲವನ್ನು ಬಯ್ದುಕೊಳ್ಳುತ್ತಾ ಸಾಗುತ್ತಿದ್ದೇವೆ**, ಆದರೆ ಅಂಥ ಕಾಲದ ಬರುವನ್ನು ಸ್ವಲ್ಪ ಮುಂದೂಡಬಹುದೇನೊ ಅನ್ನೊ ಚಿಕ್ಕ ಆಶಯ ಮಾತ್ರ ನನ್ನದು.

ಮರುದಿನ ಆಫೀಸಿಗೆ ಹೊರಡಲು ಸ್ನಾನ ಮಾಡಿ ಬಂದರೆ ದಿನಾಲೂ ಇರುತ್ತಿದ್ದ ಶರ್ಟು ಪ್ಯಾಂಟು ಜತೆಗೆ ಪ್ಯಾಂಟಿನ ಕಲರಿಗೆ ಹೊಂದಿಕೆಯಾಗುವ ಸಾಕ್ಸ ಕೂಡ ಇಟ್ಟಿದ್ಲು ;) ... ಬೇಕೆಂತಲೇ "ಬಿಳಿ ಕಲರ ಸಾಕ್ಸ ಎಲ್ಲೇ ಇದೆ" ಅಂದೆ "ಇಟ್ಟಿರುವುದನ್ನು ಹಾಕಿಕೊಂಡು ಹೋಗ್ತೀರಾ ಇಲ್ಲಾ, ನಾಳೆ ಪಿಂಕ ಶರ್ಟು, ಪಿಂಕಿ ರಿಂಗೂ ತಂದಿಡ್ತೀನಿ" ಅಂತ ಪಾಕಶಾಲೆಯಿಂದಲೇ ಗದರಿಸಿದಳು... "ಹುಡುಗಾ ಹುಡುಗಾ ಓ ನನ್ನ ಮುದ್ದಿನ ಹುಡುಗಾ... ಮುದ್ದ್ ಮಾಡೊಕು ಕಾನೂನು ಒಂದು ಬೇಕಾ" ಅಂತ ಹಾಡುತ್ತ ಶರ್ಟು ಹಾಕಿಕೊಳ್ಳುತ್ತಿದ್ರೆ "ಅದು ಹುಡುಗರ ಹಾಡಲ್ಲ, ಹಾಡಿದ್ದು ಸಾಕು ಹೊರಡ್ತೀರೊ ಇಲ್ಲೋ ಆಫೀಸಿಗೆ, ಇಲ್ಲಾ ನಾ ಬರಬೇಕಾ ಅಲ್ಲೀಗ" ಅಂತಂದಳು "ಒಕೇ ಒಕೇ ಬೇರೆ ಹಾಡು ಹಾಡ್ತೀನಿ... ಮಾಯವಾಗಿದೆ ಮದುವೆ ಹಾ.. "ಗೇ".. ಸುಮ್ಮನೇ..." ಅಂತಾ ರಾಗ ಹಿಡಿದು ಹಾಡಲು ಪ್ರಯತ್ನಿಸುತ್ತಿದ್ದರೆ ಅವಳು ಪಾಕಾಶಾಲೆಯಿಂದ ಇತ್ತ ಬರುವ ಸದ್ದಾಯಿತು... ಅವಳು ಬರ್ತಾ ಇದಾಳೆ, ಕೈಲಿ ಏನಿದೆಯೋ? ಸೌಟಿದ್ರೆ ಪರವಾಗಿಲ್ಲ, ಚಾಕೂ ಎಲ್ಲಾ ಇದ್ರೆ ತೊಂದ್ರೆ, ಅಯ್ಯೋ ಓಡಬೇಕು ದಾರಿ ಬಿಡ್ರಿ ಮತ್ತೆ ಸಿಕ್ತೀನಿ...

ಈ ಲೇಖನ ಬರೆಯಲೊ ಬೇಡವೊ ಅಂತ ನಿನ್ನೆಂದ ಯೋಚಿಸಿ ಕೊನೆಗೂ ಬರೆದು ತೆಗೆದಿರುವೆ, ಎಲ್ಲೂ ಅಶ್ಲೀಲ ಅನ್ನಿಸದ ಹಾಗೆ ಜಾಗ್ರತೆವಹಿಸಿ ಬರೆದಿದ್ದೇನೆ, ಹಾಗೂ ಎಲ್ಲೊ ಎಲ್ಲೆ ಮೀರಿದ್ದರೆ ನನ್ನ ಕ್ಷಮಿಸಿ, ಪ್ರಸ್ತಾಪ ಮಾಡಿದ ಕೆಲ ವಿಷಯಗಳು ಎಲ್ಲರಿಗೂ ಸರಿಯೆನ್ನಿಸಬೇಕಿಲ್ಲ, ಇವೆಲ್ಲ ಕೇವಲ ನನ್ನ ಮನದಿಂದ ಹೊರಹಾಕಿದ ಯೋಚನೆಗಳು, ಇದು ಸರಿ ತಪ್ಪು ಅಂತ ಹೇಳೊ ಪ್ರಯತ್ನ ಅಂತಾನೂ ಅಂದುಕೊಳ್ಳಬೇಡಿ, ಎಲ್ಲರಿಗೂ ಅವರದೇ ಆದ ಅನಿಸಿಕೆಗಳಿರುತ್ತವೆ, ಹಾಗಾಗಿ ನಾ ಹೇಳಿದ್ದೆಲ್ಲ ಎಲ್ರಿಗೂ ಅನ್ವಯವಾಗುವುದಿಲ್ಲ..

ಇಷ್ಟೊತ್ತು ಓದಿದ್ದು ಇಷ್ಟಾ ಆದ್ರೆ ಮೆಚ್ಚಿ, ಸಿಟ್ಟು ಬಂದಿದ್ರೆ ಚುಚ್ಚಿ ಇಂಚೆ (ಇ-ಅಂಚೆ) ಹಾಕಿ... ನನ್ನ ವಿಳಾಸ pm@telprabhu.com . ಹೀಗೆ ನೀವು ಓದಿ ಖುಶಿಯಾಗಿದ್ರೆ ನಿಮ್ಮ ಗೆಳೆಯರಿಗೂ ಇದನ್ನ ಕಳಿಸಿ, ಸಂತೋಷ ಇರೋದೇ ಹಂಚೋಕೆ ತಾನೆ...